- ಹಿಂದಿಯಲ್ಲಿ ಕನ್ನಡದ ಯಾವ ಲೇಖಕರು ಜನಪ್ರಿಯರು?

ಯಾರೆಲ್ಲ ಅನುವಾದಗೊಂಡು ಬಂದಿದ್ದಾರೊ ಅವರೆಲ್ಲ. ಕಾರ್ನಾಡ, ಕಂಬಾರ. ಆದರೆ ಇತರ ಒಳ್ಳೆಯ ಲೇಖಕರ ಬಗ್ಗೆ ನಮಗೆ ಗೊತ್ತಿಲ್ಲ. ಕಾರಣ, ಅನುವಾದ ಹೆಚ್ಚು ನಡೆದಿಲ್ಲ.

- ಕಾರಂತ, ಕುವೆಂಪು, ಬೇಂದ್ರೆ?

ಕಾರಂತ ಸ್ವಲ್ಪ ಬಂದಿದ್ದಾರೆ. ಕುವೆಂಪು, ಬೇಂದ್ರೆ ಹೆಸರನ್ನು ನಾವು ಕೇಳಿಲ್ಲ. ನಿಮ್ಮ ಅಕಾಡೆಮಿಗಳು ಇವರನ್ನು ಅನುವಾದ ಮಾಡಬೇಕಿದೆ. ತಮಿಳಿನಿಂದಂತೂ ಏನೂ ಬಂದಂತಿಲ್ಲ.

- ಅನುವಾದವಿಲ್ಲದೆ ಭಾರತೀಯ ಭಾಷೆಗಳಲ್ಲಿ ಬರೆಯುವುದೇ ದ್ವೀಪವಾಗುವುದು ಎಂಬಂತಾಗಿದೆ. ಭಾರತೀಯ ಭಾಷೆಗಳಲ್ಲಿ ಯಾವ ಸಾಹಿತ್ಯ ಹೆಚ್ಚು ಹಿಂದಿಗೆ ಅನುವಾದವಾಗಿದೆ?

ಮರಾಠಿ, ಪಂಜಾಬಿ, ಬಂಗಾಳಿ, ಗುಜರಾತಿ. ದಕ್ಷಿಣ ಭಾರತದ ಭಾಷೆಗಳ ಸಾಹಿತ್ಯ ಕಡಿಮೆ. ಹಿಂದಿಗೆ ಈ ಭಾಷೆಗಳಿಂದ ಅನುವಾದ ಮಾಡುವವರು ಕಡಿಮೆಯಿರಬಹುದು. ನೀವು ನಿಮ್ಮ ವರ್ಷದ ಅತ್ಯುತ್ತಮ ಸಾಹಿತ್ಯವನ್ನು ಸಂಗ್ರಹಿಸಿ ಭಾರತದ ಎಲ್ಲ ಭಾಷೆಗಳಿಗೂ ಅನುವಾದ ಮಾಡಬೇಕು

- ಕನ್ನಡದಲ್ಲಿ ಸಾಮಾಜಿಕ ಮನ್ನಣೆ ದೃಷ್ಟಿಯಿಂದ ಕಾವ್ಯಕ್ಕೆ ಮೊದಲ ಆದ್ಯತೆ. ನಂತರ ಕತೆ ಕಾದಂಬರಿ; ಕೊನೆಯಲ್ಲಿ ವಿಮರ್ಶೆ ಸಂಶೋಧನೆ. ಈ ಬಗೆಯ ತರತಮ ಹಿಂದಿಯಲ್ಲೂ ಇದೆಯೇ?

ಇದು ಹಿಂದಿಯಲ್ಲಿಲ್ಲ. ಆದರೆ ಎಲ್ಲ ಕಡೆಯಲ್ಲೂ ಕಾವ್ಯವು ಆಯಾ ಭಾಷೆಯ ಅತ್ಯುನ್ನತ ಸ್ತರದ ಅಭಿವ್ಯಕ್ತಿ ಎಂದು ಒಪ್ಪಿತವಾಗಿದೆ.

- ಉರ್ದು ಮುಶಾಯಿರಗಳಲ್ಲಿ ಶ್ರೋತೃಗಳ ಪ್ರತಿಕ್ರಿಯೆ ಜೀವಂತವಾಗಿರುತ್ತದೆ. ನಮ್ಮ ಕಾವ್ಯವಾಚನದಲ್ಲಿ ಅದು ಕಡಿಮೆ.

ಇದಕ್ಕೆ ಕಾರಣ ಫಾರಸಿಯ ಕಾರಣದಿಂದ ಉರ್ದು ಕಾವ್ಯಕ್ಕೆ ಬಂದಿರುವ ಛಂದ ಲಯ ಸಂಗೀತಾತ್ಮಕತೆ; ಉರ್ದು ಕಾವ್ಯದಲ್ಲಿರುವ ರದೀಫ್ ಕಾಫಿಯಾ ಪದ್ಧತಿಗಳು. ಗಜಲಿನಲ್ಲಿ ಪ್ರೇಕ್ಷಕರೂ ದನಿಗೂಡಿಸುವ ಅವಕಾಶವಿದೆ.

- ಹಿಂದಿ ಮತ್ತು ಉರ್ದು ಕಾವ್ಯಕ್ಕೆ ವ್ಯತ್ಯಾಸವಿದೆಯೇ?

ನಾನಂತೂ ಹಿಂದಿ ಕವಿ. ಹಿಂದಿ ಕಾವ್ಯಗೋಷ್ಠಿಯವರು ಮಾತ್ರ ಕರೆಯುತ್ತಾರೆ. ಎರಡೂ ಕಾವ್ಯಗೋಷ್ಠಿಗಳ ನಡುವೆ ವ್ಯತ್ಯಾಸವಿದೆ. ಹಿಂದಿಯಲ್ಲಿ ಈಚೆಗೆ ಗಜಲುಗಳನ್ನು ಬರೆಯುವವರು ಹುಟ್ಟಿದ್ದಾರೆ. ಆದರೆ ಗಜಲಿನ ನಿಜವಾದ ಚೆಲುವು ಉರ್ದುವಿನಲ್ಲಿ ಮಾತ್ರ ಕಾಣುತ್ತದೆ. ಪ್ರತಿಮೆ ರೂಪಕ ಸಂಕೇತ ಸೃಷ್ಟಿಯಲ್ಲಿ ಉರ್ದು ಕವಿಗಳು ಹಿಂದಿಯವರಿಗಿಂತ ಬಹಳ ಮುಂದಿದ್ದಾರೆ. ಉರ್ದು ಕವಿಗಳು ಭಾಷೆಯನ್ನು ಎಷ್ಟು ಸಾಫುಗೊಳಿಸಿದ್ದಾರೆಂದರೆ, ಅದನ್ನು ಹಿಂದಿ ಕವಿಗಳೂ ಅರ್ಥಮಾಡಿಕೊಳ್ಳುವರು. ಉರ್ದುವಿನಲ್ಲಿ ಬರೆಯುತ್ತಿರುವ ಹಿಂದು ಧಾರ್ಮಿಕ ಹಿನ್ನೆಲೆಯಿಂದ ಬಂದ ಕವಿಗಳು, ತಮ್ಮ ಸಮಕಾಲೀನ ಹಿಂದಿ ಕವಿಗಳಿಗಿಂತ ಹೆಚ್ಚು ಜನಪ್ರಿಯರಾಗಿದ್ದಾರೆ.

- ನೀವು ಹೆಚ್ಚು ಪ್ರವಾಸ ಕಥನಗಳನ್ನು ಬರೆದಿದ್ದೀರಿ.

ಹೌದು. ಪ್ರವಾಸ ಕಥನ ನನ್ನ ಇಷ್ಟದ ಪ್ರಕಾರ. ಇರಾನಿನ ಮೇಲೆ 'ಚಲ್ತೆತೊ ಅಚ್ಛಾಹೈ' ಬರೆದೆ. ಪಾಕಿಸ್ತಾನಕ್ಕೆ ಹೋಗಿಬಂದ ಮೇಲೆ 'ಪಾಕಿಸ್ತಾನ ಕ ಮತಲಬ್ ಕ್ಯಾ ಹೈ' ಬರೆದೆ. ಜೋರ್ಡಾನಿನ ಮೇಲೊಂದು ಇದೆ. ಈಶಾನ್ಯ ಭಾರತದ ಮೇಲೆ ಬರೆದಿರುವೆ. ರುಮೇನಿಯಾ–ಉಕ್ರೇನ್ ಗಡಿಯಲ್ಲಿರುವ ಪ್ರದೇಶ ಮಾರಾಮಾರೋಶ್ ಮೇಲೆ ಬರೆದೆ.

- ನಿಮ್ಮ ಪೂರ್ವಜರು ಇರಾನ್ ಮೂಲದವರು ಎಂದು ಕೇಳಿದ್ದೇನೆ.

ಹೌದು, ಅವರು ಪೂರ್ವಜರು ಇರಾನಿನ ಖುರಾಸಾನ್ ಪ್ರಾಂತ್ಯದವರು. ಸುಮಾರು ಐನೂರು